(ದಿನಾಂಕ.31.08.2024 ರ ಆದೇಶದಂತೆ ಸಾಕ್ಷಿಯನ್ನು ಮುಂದುವರೆದ ಮುಖ್ಯ ವಿಚಾರಣೆಗೆ ಪುನಃ ಕರೆಸಲಾಗಿದೆ)

ದಿನಾಂಕಃ 31.08.2024 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆಃ ಶ್ರೀ ಹೆಚ್.ಎಸ್. ವಕೀಲರಿಂದಃ**

ಸಾಕ್ಷಿಯು ಈ ಕೆಳಕಂಡ ದಾಖಲೆಗಳನ್ನು ಹಾಜರು ಮಾಡಿದ್ದು ಅವುಗಳನ್ನು ಈ ಕೆಳಕಂಡಂತೆ ನಿಶಾನೆಯಾಗಿ ಗುರುತಿಸಲಾಗಿದೆ.

| ಕ್ರ. ಸಂ. | ದಾಖಲಾತಿಗಳು | ನಿಶಾನೆಗಳು |
|---|---|---|
| 1 | ಎರಡು ಮರಣ ಪ್ರಮಾಣ ಪತ್ರಗಳ ದೃಡೀಕೃತ ನಕಲುಗಳು | ನಿಪಿ-19 ಮತ್ತು ನಿಪಿ-20 |
| 2 | ವಂಶವೃಕ್ಷ ಪ್ರಮಾಣ ಪತ್ರದ ದೃಡೀಕೃತ ನಕಲು | ನಿಪಿ-21 |

**ಮುಂದುವರೆದ ಪಾಟೀ ಸವಾಲು: ಪ್ರತಿವಾದಿಗಳ ಪರ ಶ್ರೀ ಎಸ್.ಡಿ. ವಕೀಲರಿಂದ:**

ನಿಪಿ-19 ನಿಪಿ-15 ರಲ್ಲಿ ಸಹಿ ಮಾಡಿರುವ ದಿವಾಕರವರದಲ್ಲ ಎಂದರೆ ಸರಿಯಲ್ಲ. ನಿಪಿ-19 ಅನ್ನು ನಾನೇ ಪಡೆದುಕೊಂಡಿದ್ದೇನೆ. ನಾನು ದಿವಾಕರವರ ಕುಟುಂಬಸ್ಥನಲ್ಲ. ನಿಪಿ-19 ರಿಂದ 21 ಅನ್ನು ಪಡೆದುಕೊಳ್ಳಲು ಸಂಬಂದಪಟ್ಟ ಕಚೇರಿಗೆ ಅರ್ಜಿಯನ್ನು ಕೊಟ್ಟಿರುತ್ತೇನೆ. ಆ ಸಂಬಂದ ದಾಖಲೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿಯು ಬಿಬಿಎಂಪಿರವರಿಗೆ ಅರ್ಜಿ ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ನಿಪಿ-15 ಮತ್ತು19 ರ ದಾಖೆಗಳನ್ನು ಪ್ರಕರಣಕ್ಕೆ ಉಪಯೋಗವಾಗುವಂತೆ ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ಸತ್ಯಮೂರ್ತಿರವರು ಬೆಂಗಳೂರಿನಲ್ಲಿ ವಾಸಿಸುತ್ತಿದ್ದರು. ನಿಪಿ-15 ರಲ್ಲಿ ಸತ್ಯಮೂರ್ತಿರವರ ಸಹಿ ಇಲ್ಲ ಎಂದರೆ ಸರಿಯಲ್ಲ. ಲಕ್ಷ್ಮೀನಾರಾಯಣರವರ ಸಹಿಯೂ ಸಹ ನಿಪಿ-15 ರಲ್ಲಿ ಇಲ್ಲ ಎಂದರೆ ಸರಿಯಲ್ಲ. ನಿಪಿ-19 ರಿಂದ 22 ರ ದಾಖಲೆಗಳನ್ನು ಪಡೆದುಕೊಳ್ಳಲು ನಾನು ಅರ್ಹನಲ್ಲ ಎಂದರೆ ಸರಿಯಲ್ಲ. ನಿಪಿ-22 ಅನ್ನು ಸಿ.ವಿ.ಲಕ್ಷ್ಮೀನಾರಾಯಣರವರ ಮಗ ಮಾಡಿಸಿ ಕೊಟ್ಟದ್ದಾರೆ. ನಿಪಿ-19 ರಿಂದ 22 ರ ದಾಖಲೆಗಳಿಗೂ, ನಿಪಿ-15 ರ ದಾಖಲೆಗೂ ಒಂದಕ್ಕೊಂದು ಸಂಬಂದ ಇಲ್ಲ ಎಂದರೆ ಸರಿಯಲ್ಲ. ನಿಪಿ-15 ಅನ್ನು ನಾನೇ ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳ ಜಮೀನನ್ನು ಕಬಳಿಸಬೇಕೆಂಬ ಉದ್ದೇಶದಿಂದ ಸುಳ್ಳು ದಾಖಲೆಗಳನ್ನು ಸೃಷ್ಟಿಸಿ, ಸುಳ್ಳು ದಾವಾ ಸಲ್ಲಿಸಿ, ಸುಳ್ಳು ಸಾಕ್ಷ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಈ ದಾವಾ ಸಲ್ಲಿಸಲು ಯಾವ ವ್ಯಾಜ್ಯ ಕಾರಣ ಇಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

ಅ.ದಾ.111/2021    ಪಿಡಬ್ಲ್ಯೂ-1

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಪ್ರಧಾನ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.